ದಿನಾಂಕಃ 31-08-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ಪ್ರತಿವಾದಿಯರು ಮೂರು ಮುಕ್ಕಾಲು ಗುಂಟೆ ಜಮೀನನ್ನು ಜಂಟಿಯಾಗಿ ಖರೀದಿಸಿದ್ದಾರೆ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ಖರೀದಿ ಪತ್ರ ವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಬೇರೆ ಆಗಿದ್ದಾರೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದ ಮೂಲಕ ಅವರು ಭಾಗ ಮಾಡಿಕೊಂಡಿದ್ದಾರೆ. ಈಗಲೂ ಸಹ ಪಹಣಿಯಲ್ಲಿ ಜಂಟಿ ಇದೆ ಎಂದರೆ, ಎರಡೂ ಬರುತ್ತಿವೆ. ಪ್ರತಿವಾದಿಯರು ಆಲಪಟ್ಟಿ ಚೆನ್ನ ವೆಂಕಣ್ಣ ರವರ ಕಡೆಯಿಂದ ಆ ಜಮೀನು ಖರೀದಿಸಿದ್ದಾರೆ ಎಂದರೆ ಸರಿ. ಅದರ ಸರ್ವೇ ನಂ. 58/7 ಎಂದರೆ ಸರಿ. ಆ ಜಮೀನಿನ ಚಕಬಂದಿ ಪೂರ್ವಕ್ಕೆ ಡಿ ವೆಂಕಟರಾವ್ ರವರ ಜಮೀನು ಇದೆ ಎಂದರೆ ಸರಿ ಅಲ್ಲ. ಪಶ್ಚಿಮಕ್ಕೆ ಮಾರಾಟಗಾರರ ಉಳಿದ ಜಮೀನು ಎಂದರೆ ಸರಿ ಅಲ್ಲ. ಉತ್ತರಕ್ಕೆ ಬಳ್ಳಾರಿ ರಸ್ತೆ ಇದೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಮಾರಾಟಗಾರರ ಉಳಿದ ಜಮೀನು ಎಂದರೆ ಸರಿ ಅಲ್ಲ. ಅದೇರೀತಿ ಖರೀದಿ ಪತ್ರದಲ್ಲಿ ಸರ್ವೇ ನಂ. 58 ರಲ್ಲಿ ಪೂರ್ವ ದಿಕ್ಕಿನಲ್ಲಿ ಉತ್ತರ-ದಕ್ಷಿಣ ಬಂಡಿ ದಾರಿ ಎಂದು ಬರೆದಿದೆ ಎಂದರೆ ಸರಿ ಅಲ್ಲ. ನಾನು ಆ ಖರೀದಿ ಪತ್ರ ವನ್ನು ಮತ್ತು ಅದರಲ್ಲಿರುವ ಚಕಬಂದಿಯನ್ನು ನೋಡಿಲ್ಲ.

ಸರ್ವೇ ನಂ.58 ರಲ್ಲಿ ಎಷ್ಟು ಜನ ಮನೆ ಕಟ್ಟಿದ್ದಾರೆ ಎಂದರೆ, ಅದು ದೊಡ್ಡದಿದೆ ಬಹಳ ಜನ ಮನೆ ಕಟ್ಟಿದ್ದಾರೆ. ಸರ್ವೇ ನಂ.58 ರಲ್ಲಿ ಬಳ್ಳಾರಿ ರಸ್ತೆಗೆ ಹೊಂದಿಕೊಂಡು ನಾಗಲಿಂಗಾಚಾರಿಯವರು ಮನೆ ಇದೆ ಎಂದರೆ ಸರಿ. ನಾಗಲಿಂಗಾಚಾರಿಯವರ ಮನೆ ಹಿಂದೆ ಸತ್ಯನಾರಾಯಣರವರ ಮನೆ ಇದೆ. ಅವರ ಮನೆ ಹಿಂದೆ ವೆಂಕಟರಾವ್ ರವರ ಮನೆ ಇದೆ. ಅವರ ಮನೆ ಹಿಂದೆ ಸಿಸಿ ರಸ್ತೆ ಉತ್ತರ-ದಕ್ಷಿಣ ಇದೆ ಎಂದರೆ ಸರಿ. ಆ ರಸ್ತೆಯು ಮುಖ್ಯ ಕೆನಾಲವರೆಗೆ ಇದೆ ಎಂದರೆ ಸರಿ. ಆ ಸಿಸಿ ರಸ್ತೆ ಮೂಲಕ ದಕ್ಷಿಣದಿಂದ ಉತ್ತರಕ್ಕೆ ನನ್ನ ಮನೆಗೆ ಬರುತ್ತೇನೆ ಎಂದರೆ ಸರಿ ಅಲ್ಲ. ಆ ರಸ್ತೆ ಅರ್ಧಕ್ಕೆ ನಿಂತಿದೆ.

ಸರ್ವೇ ನಂ. 58 ರ ಪೂರ್ವಕ್ಕೆ 61 ರ ಜಮೀನು ಇದೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಸರ್ವೇ ನಂ.60 ರ ಜಮೀನು ಇದೆ ಎಂದು ನುಡಿಯುತ್ತಾರೆ. ಸರ್ವೇ ನಂ.60 ರಲ್ಲಿ ಪ್ರತಿವಾದಿಯರ ತಂದೆ ಖರೀದಿ ಮಾಡಿದ್ದಾನೆ ಎಂದರೆ ಸರಿ. ಆ ಖರೀದಿ ಪತ್ರದಲ್ಲಿ ಖರೀದಿ

ಜಮೀನಿನ ಪೂರ್ವಕ್ಕೆ ಜಿ ಸೂರ್ಯನಾರಾಯಣ, ಪಶ್ಚಿಮಕ್ಕೆ ಎ.ವೆಂಕಟರಾವ್, ಉತ್ತರಕ್ಕೆ ಇ. ರಂಗಾರಾವ್ ಮತ್ತು ಬಳ್ಳಾರಿ ರಸ್ತೆ, ಹಾಗೂ ದಕ್ಷಿಣಕ್ಕೆ ಎಲ್ ಜಗ್ಗಾರಾವ್‌ರವರ ಆಸ್ತಿ ಎಂದು ಬರೆದಿದೆ ಎಂದರೆ ಸರಿ. ಸರ್ವೆ ನಂ. 61 ರಲ್ಲಿ ಪ್ರತಿವಾದಿಯ ತಂದೆ ಜಮೀನು ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಬರೆದ ಚಕಬಂದಿ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಖರೀದಿಸಿದ ಖರೀದಿ ಪತ್ರ ಗಳನ್ನು ಸಲ್ಲಿಸಿದ್ದೀರಾ ಎಂದರೆ, ಸರ್ವೆ ನಂ.61 ರ ಖರೀದಿ ಪತ್ರ ಸಲ್ಲಿಸಿದ್ದೇನೆ

ನಾನು ಖರೀದಿಸುವ ಸಂದರ್ಭದಲ್ಲಿ ದಾವಾ ಸ್ವತ್ತು ಪ್ರತಿವಾದಿಯರು ಜಂಟಿ ಮಾಲೀಕತ್ವದಲ್ಲಿ ಇರಲಿಲ್ಲ. ನಾನು ಖರೀದಿಸುವ ಸಂದರ್ಭದಲ್ಲಿ ಜಮೀನಿನ ಅಳತೆ ಮಾಡಿಸಿದ್ದೆ. ನಾನು ಸಲ್ಲಿಸಿದ ನಕ್ಷೆಯಲ್ಲಿ ಚಕಬಂದಿ ಬರೆಸಿಲ್ಲ ಎಂದರೆ ಸರಿ ಅಲ್ಲ. ಅದರಲ್ಲಿ ಚಕಬಂದಿ ಬರೆಯದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಸರ್ವೆ ನಂ. 60 ರಲ್ಲಿ ಯಾವುದೇ ದಾರಿ ಇಲ್ಲದಿದ್ದರೂ ಸಹ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸರ್ವೆ ನಂ.58 ರಲ್ಲಿ ದಾರಿ ಇದೆ ಎಂದು ಗೊತ್ತಿದ್ದರೂ ಸಹ ಸರ್ವೆ ನಂ.60 ರಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಪ್ರತಿವಾದಿಯರ ತಂದೆ ಖರೀದಿಸಿದ ಕ್ರಯಪತ್ರಗಳಲ್ಲಿ ನಮೂದಿಸಿದಂತೆ ಸರ್ವೆ ನಂ 60 ರಲ್ಲಿ ದಾರಿ ಇಲ್ಲ ಎಂದು ಗೊತ್ತಾಗಿದ್ದರಿಂದ ಅವುಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ ಅಲ್ಲ. ನ್ಯಾಯಾಲಯದಿಂದ ಕಮೀಷನರ್ ನನ್ನು ನೇಮಕ ಮಾಡಿ ರಸ್ತೆ ಇರುವ ಬಗ್ಗೆ ಪರೀಶೀಲನೆ ಮಾಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿ ಅಲ್ಲ.

ದಾರಿ ವಿಚಾರವಾಗಿ ಪ್ರತಿವಾದಿಯರು ನನ್ನ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ ಅಲ್ಲ. ಅದರ ಸಿಟ್ಟಿನಿಂದ ಪ್ರತಿವಾದಿಯರ ವಿರುದ್ದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.